ಶ್ರೀ ಕೆ.ಎಸ್.ಈಶ್ವರಪ್ಪ: ಸರ್ಕಾರ ಅದನ್ನು ಒಪ್ಪಿಕೊಂಡು ಆಗಿದೆ. ಅದಕ್ಕೆ ಒಬ್ಬ ಮಂತ್ರಿಯನ್ನೂ ಕೊಟ್ಟಿದ್ದೀರಿ. ಆ ಮಂಡಳಿಗೆ ಒಬ್ಬರನ್ನು ಅಧ್ಯಕ್ಷರನ್ನಾಗಿಯೂ ಮಾಡಿದ್ದೀರಿ. ಈಗ ನಮ್ಮ ಹತ್ತಿರ ಏಕೆ ಕೇಳುವುದಕ್ಕೆ ಬರುತ್ತೀರಿ? ನಮ್ಮ ಪ್ರಶ್ನೆಯೆಂದರೆ 1997-98ರ 5 ಕೋಟಿ 30 ಲಕ್ಷವನ್ನು ಯಾವಾಗ ಬಿಡುಗಡೆ ಮಾಡುತ್ತೀರಿ?

ಶ್ರೀ ಎಂ.ಸಿ.ನಾಣಯ್ಯ: 1997-98ರ ಆಕ್ಷನ್ ಪ್ಲಾನ್‌ನ ಮೊತ್ತವೇನು ಎನ್ನುವುದನ್ನು ಮಂತ್ರಿಗಳು ಹೇಳಿದ್ದಾರೆ. ಆದರಲ್ಲಿ 15 ಕೋಟಿರೂಗಳನ್ನು ಈಗಾಗಲೇ ಬಿಡುಗಡೆ ಮಾಡಿದ್ದಾರೆ. ಬಾಕಿ ಇರತಕ್ಕಂಥಾದ್ದು ಸುಮಾರು 5 ಕೋಟಿ ರೂಪಾಯಿಗಳು, ಇದು ಬಿಡುಗಡೆಯಾಗಬೇಕಾಗಿದೆ. ಎಸ್‌ಸಿಪಿಯಲ್ಲಿ ಇರತಕ್ಕಂಥ 7 ಕೋಟಿ ಮತ್ತು ಇದರಲ್ಲಿರತಕ್ಕಂಥ 5 ಕೋಟಿ ಇವುಗಳನ್ನು ಬಿಡುಗಡೆ ಮಾಡುವ ಬಗ್ಗೆ ಈಗಾಗಲೇ ಮಂತ್ರಿಗಳು ಹಣಕಾಸು ಇಲಾಖೆಗೆ ಬರೆದಿದ್ದಾರೆ. ನಾವೂ ಸಹ ಉಪ ಮುಖ್ಯಮಂತ್ರಿಗಳ ಜೊತೆಯಲ್ಲಿ ಈ ವಿಷಯವನ್ನು ತೆಗೆದುಕೊಳ್ಳುತ್ತೇವೆ. ನಾವು ಸರ್ಕಾರದ ಕಡೆಯಿಂದ ಈ ಹಣವನ್ನು ಬಿಡುಗಡೆ ಮಾಡಲು ಕ್ರಮ ಕೈಗೊಳ್ಳುತ್ತೇವೆ.

ವಿಷಯ: ಬೆಂಗಳೂರಿನಲ್ಲಿ ಕೊಳವೆ ಬಾವಿಗಳು.

210 (1233)

ಶ್ರೀ ಎನ್.ರಾಜಣ್ಣ (ಭಾರತೀನಗರ): ಮಾನ್ಯ ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನಲ್ಲಿ ಕುಡಿಯುವ ನೀರಿಗೆ ಅಭಾವ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಬೆಂಗಳೂರು ನಗರದಲ್ಲಿ ಇದನ್ನು ನಿವಾರಿಸಲು ಕೊಳವೆ ಬಾವಿಗಳನ್ನು ಕೊರೆಯುವ ಯೋಜನೆಯನ್ನು ಸರ್ಕಾರ ಹಮ್ಮಿಕೊಂಡಿದೆಯೆ?

ಇ) ಇಲ್ಲಿಯವರೆಗೆ ಎಷ್ಟು ಕೊಳವೆ ಬಾವಿಗಳನ್ನು ಹೊಸದಾಗಿ ಕೊರೆಸಲಾಗಿದೆ?

ಈ) ಭಾರತೀನಗರ ವಿಧಾನ ಸಭಾ ಕ್ಷೇತ್ರದಲ್ಲಿ ಎಷ್ಟು ಕೊಳವೆ ಬಾವಿಗಳನ್ನು ಹೊಸದಾಗಿ ಕೊರೆಸಲಾಗಿದೆ?

ಉ) ಕಾವೇರಿ ನದಿಯಿಂದ ಹೆಚ್ಚಿನ ಪ್ರಮಾಣದಲ್ಲಿ ನೀರನ್ನು ಪಡೆದುಕೊಳ್ಳಲು ಕೈಗೊಂಡ ಕ್ರಮಗಳೇನು?

ಶ್ರೀ ಅನಂತ್‌ನಾಗ್ (ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು):

ಅ) ಬಂದಿದೆ.

ಆ) ಹಮ್ಮಿಕೊಂಡಿದೆ.

ಇ) ಈಗಾಗಲೇ 97-98ರಲ್ಲಿ 249 ಕೊಳವೆ ಬಾವಿಗಳನ್ನು ಕೊರೆದು 209 ಹ್ಯಾಂಡ್ ಪಂಪ್ 40 ವಿದ್ಯುತ್ ಪಂಪನ್ನು ಅಳವಡಿಸಲಾಗಿದೆ. ಹಾಗೂ ಇನ್ನೂ 325 ಕೊಳವೆ ಬಾವಿಗಳನ್ನು ಕೊರೆಯಲು ರೂ.253.50 ಲಕ್ಷಗಳಿಗೆ ಅಂದಾಜು ಪಟ್ಟಿ ತಯಾರಿಸಲಾಗಿದೆ.

ಈ) 15 ಕೊಳವೆ ಬಾವಿಗಳನ್ನು 96-97ರಲ್ಲಿ ಕೊರೆಯಲಾಗಿದೆ.

ಉ) 1. ಈಗಾಗಲೇ ಕಾವೇರಿ 3ನೇ ಹಂತದಲ್ಲಿ ಒಂದು ಹೆಚ್ಚುವರಿ ಪಂಪ್ (6ನೇ ಪಂಪ್) ಕಮೀಷನ್ ಮಾಡಿ ದಿನವಹಿ 27 ಮಿಲಿಯನ್ ಹೆಚ್ಚುವರಿ ನೀರು ಸರಬರಾಜು ಮಾಡಲಾಗುತ್ತಿದೆ.

2. ದಿನವಹಿ 270 ಮಿಲಿಯನ್ ನೀರು ಸರಬರಾಜು ಮಾಡಲು ಕಾವೇರಿ ನಾಲ್ಕನೇ ಹಂತ ಫೇಜ್-1 ಯೋಜನೆ ಪ್ರಾರಂಭಿಸಲಾಗಿದೆ.

ಶ್ರೀ ಎನ್.ರಾಜಣ್ಣ: ಮಾನ್ಯ ಉಪಾಧ್ಯಕ್ಷರೆ, ಬೆಂಗಳೂರು ನಗರದಲ್ಲಿ ಕುಡಿಯುವ ನೀರಿನ ಅಭಾವವನ್ನು ನಿವಾರಿಸಲು ಎಷ್ಟು ಕೊಳವೆ ಬಾವಿಗಳನ್ನು ಹೊಸದಾಗಿ ಕೊರೆಯಲಾಗಿದೆ? ಅದರಲ್ಲಿ ಭಾರತಿನಗರಕ್ಕೆ ಎಷ್ಟು ಕೊರೆಯಿಸಲಾಗಿದೆ? ಎಷ್ಟು ಹ್ಯಾಂಡ್ ಪಂಪ್‌ಗಳು ಕೆಟ್ಟುಹೋಗಿವೆ? ಕೆಟ್ಟುಹೋಗಿರುವ ಕೈಪಂಪುಗಳನ್ನು ರಿಪೇರಿ ಮಾಡುವುದಕ್ಕೆ ಎಷ್ಟು ಸಮಯ ಬೇಕು ಎಂಬುದನ್ನು ದಯಮಾಡಿ ಮಾನ್ಯ ಮಂತ್ರಿಗಳು ಹೇಳಬೇಕು.

ಶ್ರೀ ಅನಂತ್‌ನಾಗ್: ಮಾನ್ಯ ಉಪಾಧ್ಯಕ್ಷರೆ, 1997-98ರಲ್ಲಿ 249 ಕೊಳವೆ ಬಾವಿಗಳನ್ನು ಕೊರೆದು 209 ಕೈಪಂಪುಗಳು ಮತ್ತು 40 ವಿದ್ಯುತ್ ಪಂಪನ್ನು ಅಳವಡಿಸಲಾಗಿದೆ. ಹಾಗೂ ಇನ್ನೂ 325 ಕೊಳವೆ ಬಾವಿಗಳನ್ನು ಕೊರೆಯಲು ರೂ.253.50 ಲಕ್ಷಗಳಿಗೆ ಅಂದಾಜು ಪಟ್ಟಿ ತಯಾರಿಸಿ ಹಣವನ್ನು ಸರ್ಕಾರದಿಂದ ಕೇಳಿದ್ದೇವೆ. ಭಾರತೀನಗರ ವಿಧಾನ ಸಭಾ ಕ್ಷೇತ್ರದಲ್ಲಿ ಕಳೆದ ವರ್ಷ 15 ಕೊಳವೆ ಬಾವಿಗಳನ್ನು ಕೊರೆಯಲಾಗಿದೆ. ಇನ್ನು ಬೆಂಗಳೂರು ನಗರಕ್ಕೆ 33 ಹೊಸ ವಾರ್ಡ್‌ಗಳು ಸೇರಿಕೊಂಡಿವೆ. ಹೊಸ ವಾರ್ಡುಗಳಲ್ಲಿ ಪ್ರತಿಯೊಂದು ವಾರ್ಡ್‌ಗೆ 5 ಕೊಳವೆ ಬಾವಿಗಳನ್ನು ಮತ್ತು ಹಳೆಯ ವಾರ್ಡುಗಳಿಗೆ ಒಂದೊಂದು ಕೊಳವೆ ಬಾವಿಯನ್ನು ಕೊರೆಯುವ ವ್ಯವಸ್ಥೆ ಮಾಡಲಾಗಿದೆ. ಅದರಂತೆ ಸಿ.ವಿ.ಆರ್. ನಗರದಲ್ಲಿ 3 ಕೊಳವೆ ಬಾವಿಗಳನ್ನು ಕೊರೆಯಿಸಿದ್ದು ಅದರಲ್ಲಿ 2 ಕೊಳವೆ ಬಾವಿಗಳು ವಿಫಲವಾಗಿವೆ. ಬೆನಗಾನಹಳ್ಳಿ, ಸರ್ವಜ್ಞನಗರ ಮತ್ತು ಎಂ.ಎಸ್.ನಗರದಲ್ಲಿ ಒಂದೊಂದು ಕೊಳವೆ

ಬಾವಿಗಳು ಹಾಗೂ ಲಿಂಗರಾಜಪುರದಲ್ಲಿ 5 ಹೀಗೆ 15 ಕೊಳವೆ ಬಾವಿಗಳನ್ನು ಕೊರೆಯಿಸಲಾಗಿದೆ. ಆದರಲ್ಲಿ 2 ಕೊಳವೆ ಬಾವಿಗಳಲ್ಲಿ ನೀರು ಸಿಗದೆ ವಿಫಲವಾಗಿವೆ. ಕೆಲವು ಕಡೆ ಹ್ಯಾಂಡ್ ಪಂಪ್‌ಗಳು ಕೆಟ್ಟುಹೋಗಿವೆ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅದನ್ನು ರಿಪೇರಿ ಮಾಡಿಸುವ ಸಲುವಾಗಿ ಇದೇ ದಿನ ಸಂಬಂಧಪಟ್ಟ ಅಧಿಕಾರಿಗಳಿಗೆ ಪತ್ರ ಬರೆದು ಕ್ರಮ ಕೈಗೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎನ್.ರಾಜಣ್ಣ: ಮಾನ್ಯ ಉಪಾಧ್ಯಕ್ಷರೆ, ನನ್ನ 5 ಪ್ರಶ್ನೆಗೆ ಉತ್ತರವಾಗಿ ಕಾವೇರಿ 3ನೇ ಹಂತದಲ್ಲಿ ಒಂದು ಹೆಚ್ಚುವರಿ ಪಂಪ್ ಕಮೀಷನ್ ಮಾಡಿ ದಿನವಹಿ 27 ಮಿಲಿಯನ್ ಹೆಚ್ಚುವರಿ ನೀರು ಸರಬರಾಜು ಮಾಡಲಾಗುತ್ತಿದೆ ಎಂದು ಹೇಳಿದ್ದಾರೆ. ಇಲ್ಲಿ 27 ಮಿಲಿಯನ್ ಇದು ಲೀಟರ್ಸ್ ನೀರು ಅಥವಾ ಗ್ಯಾಲನ್ ನೀರು ಯಾವುದು ಎಂಬುದನ್ನು ಹೇಳಬೇಕು. ಹಾಗೆಯೇ ಮುಂದಿನ ಉತ್ತರದಲ್ಲಿ 'ದಿನವಹಿ 270 ಮಿಲಿಯನ್ ನೀರು ಸರಬರಾಜು ಮಾಡಲು ಕಾವೇರಿ ನಾಲ್ಕನೇ ಹಂತ ಫೇಜ್-1 ಯೋಜನೆ ಪ್ರಾರಂಭಿಸಲಾಗಿದೆ' ಎಂದು ಹೇಳಿದ್ದಾರೆ. ಕಾವೇರಿ 4ನೇ ಹಂತದ ಕೆಲಸಕ್ಕೆ ಜಪಾನ್ ಸಂಸ್ಥೆಯಿಂದ ಹಣ ಬರುತ್ತದೆಂದು ತಿಳಿದು ಬಂದಿದ್ದು, ಆ ಯೋಜನೆಗೆ ಹಣ ಕೊಡಬೇಡಿ ಎಂದು ತಮಿಳುನಾಡು ಸರ್ಕಾರದವರು ಜಪಾನ್ ಸಂಸ್ಥೆಗೆ ಹೇಳಿದ್ದಾರಲ್ಲವೇ? ಒಂದು ವೇಳೆ ಈ ಯೋಜನೆಗೆ ಜಪಾನ್ ಸಂಸ್ಥೆಯಿಂದ ಹಣ ಬರಲಿಲ್ಲವೆಂದರೆ ಬಾಂಡ್ ಅಥವಾ ಇನ್ನು ಬೇರೆ ಯಾವುದಾದರೂ ಮೂಲಗಳಿಂದ ಹಣ ಸಂಗ್ರಹ ಮಾಡುವುದಕ್ಕೆ ಯೋಚನೆ ಮಾಡಿದ್ದೀರಾ? ಬೇರೆ ಯಾವ ಮೂಲದಿಂದ ಹಣವನ್ನು ಸಂಗ್ರಹ ಮಾಡುವುದಕ್ಕೆ ಯೋಜನೆ ಹಾಕಿಕೊಂಡಿದ್ದೀರಿ?

ಶ್ರೀ ಅನಂತನಾಗ್: ಮಾನ್ಯ ಉಪಾಧ್ಯಕ್ಷರೆ, 27ಸಾವಿರ ಮಿಲಿಯನ್ ಗ್ಯಾಲನ್ ಅಥವಾ ಲೀಟರ್ಸ್, ಇದರಲ್ಲಿ ಯಾವುದು ಎಂಬುದನ್ನು ಮಾನ್ಯ ಸದಸ್ಯರು ಕೇಳಿದ್ದಾರೆ. ಅದು ಮಿಲಿಯನ್ ಲೀಟರ್ಸ್ ಪರ್ ಡೇ ಆಗಿರುತ್ತದೆ. ಅದು ಗ್ಯಾಲನ್ ನೀರು ಅಲ್ಲ. ಇನ್ನು ಕಾವೇರಿ 4ನೇ ಹಂತದ ಕುಡಿಯುವ ನೀರಿನ ಯೋಜನೆಗೆ ಒ.ಇ.ಸಿ.ಎಫ್.ನಿಂದ 804 ಕೋಟಿ ರೂಪಾಯಿಗಳ ಸ್ಯಾಂಕ್ಷನ್ ಆಗಿದೆ. ಈ ಯೋಜನೆಗೆ ಹಣ ಕೊಡಬಾರದೆಂದು ತಮಿಳುನಾಡು ಸರ್ಕಾರದ ಮುಖ್ಯಕಾರ್ಯದರ್ಶಿಯವರು ಜಪಾನ್ ದೇಶದಸಂಸ್ಥೆಗೆ ಬರೆದ ಪತ್ರದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆ ಕೊಟ್ಟಿದ್ದಾರೆ. ಅದು ಯಾವುದೇ ಇದ್ದರೂ ಕೂಡ ನಮ್ಮ ಕೆಲಸಕಾರ್ಯಗಳು ಮುಂದುವರೆಯುತ್ತವೆ ಎನ್ನುವ ಭರವಸೆ ನಮ್ಮ ಸರ್ಕಾರಕ್ಕೆ ಇದೆ. ಅವರಿಂದ ಹಣ ಬಾರದೇ ಇದ್ದರೆ ಬಾಂಡ್‌ಮುಖಾಂತರ ಹಣ ಸಂಗ್ರಹ ಮಾಡುತ್ತೀರಾ ಎಂದು ಕೇಳಿದ್ದಾರೆ. ಆದರೆ ಇಂಥ ಯಾವ ಯೋಜನೆಯು ಸಧ್ಯಕ್ಕೆ ಇಲ್ಲ. ಏಕೆಂದರೆ ಕೇಂದ್ರ ಸರ್ಕಾರದಿಂದ ಈ ಯೋಜನೆಗೆ ಅನುಮತಿ ದೊರಕಿದೆ. ಆದರೆ ಕೆಲವು ಸಣ್ಣ ರಾಜಕೀಯವನ್ನು ಬೇರೆ ರಾಜ್ಯದವರು ಮಾಡಿದ್ದಾರೆ. ಅದಕ್ಕೆ ಉತ್ತರವನ್ನು ಮಾನ್ಯ ಮುಖ್ಯಮಂತ್ರಿಗಳವರು ಆಗಲೇ ನೀಡಿದ್ದಾರೆಂದು ನನಗನ್ನಿಸುತ್ತದೆ.

ಶ್ರೀ ಎನ್.ರಾಜಣ್ಣ: ಮಾನ್ಯ ಉಪಾಧ್ಯಕ್ಷರೆ, ಕಾವೇರಿ ಕುಡಿಯುವ ನೀರಿನ 4ನೇ ಹಂತದ ಯೋಜನೆಯನ್ನು ಮಾಡುವುದಕ್ಕೆ ಎಲ್ಲವೂ ಕ್ಲಿಯರ್ ಆಗಿ ಇವೆ. ಇದಕ್ಕೆ ಯಾರೂ ಸಹ ಅಡಚಣೆ ಮಾಡುವ ಹಾಗಿಲ್ಲ. ಬೆಂಗಳೂರು ಕರ್ನಾಟಕ ರಾಜ್ಯದ ರಾಜಧಾನಿಯಾಗಿದೆ. ಈ ರಾಜಧಾನಿಯಲ್ಲಿ ಕರ್ನಾಟಕದವರು ಹೆಚ್ಚಿಗೆ ವಾಸ ಮಾಡುತ್ತಿಲ್ಲ. 27 ರಾಜ್ಯಗಳಲ್ಲಿನ ಹೆಚ್ಚಿನ ಜನರು ಬೆಂಗಳೂರಿಗೆ ಬಂದು ವಾಸಿಸುತ್ತಿದ್ದಾರೆ. ಇಲ್ಲಿಯ ಕುಡಿಯುವ ನೀರಿಗೋಸ್ಕರ ಕೇಂದ್ರ ಸರ್ಕಾರ, ತಮಿಳುನಾಡು ಸರ್ಕಾರ ಸಹಾಯ ಮಾಡಬೇಕು. ಹಣ ಕೊಡಬಾರದು ಎಂದು ತಮಿಳುನಾಡು ಸರ್ಕಾರದವರು ಜಪಾನ್ ಸಂಸ್ಥೆಗೆ ಬರೆಯಬಹುದೇ? ತಮಿಳುನಾಡಿನಲ್ಲಿಯ ವ್ಯವಸಾಯಕ್ಕೆ ನೀರು ಬೇಕಾದಾಗ ಒತ್ತಡ ತಂದು ನೀರನ್ನು ಪಡೆದುಕೊಂಡರು, ಆದರೆ ಇಲ್ಲಿಯ ಕುಡಿಯುವ ನೀರಿಗೆ ಅವರು ಅಡಚಣೆ ಮಾಡುವುದು ಸರಿಯಿಲ್ಲ. ಈ ವಿಷಯವನ್ನು ಸರ್ಕಾರ ಸೀರಿಯಸ್ ಆಗಿ ತೆಗೆದುಕೊಂಡು ಕೇಂದ್ರ ಸರ್ಕಾರಕ್ಕೆ ಒತ್ತಡ ತಂದು ಈ ಯೋಜನೆಗೆ ಜಪಾನ್ ಸಂಸ್ಥೆಯಿಂದ ಹಣ ಸ್ಯಾಂಕ್ಷನ್ ಆಗುವ ಹಾಗೆ ಮಾಡಬೇಕು.

ಶ್ರೀ ಅನಂತ್‌ನಾಗ್: ಮಾನ್ಯ ಉಪಾಧ್ಯಕ್ಷರೆ, ಈ ವಿಷಯವನ್ನು ಸರ್ಕಾರ ಗಂಭೀರವಾಗಿ ತೆಗೆದುಕೊಂಡಿದೆ. ಈ ವಿಚಾರದಲ್ಲಿ ಪ್ರತ್ಯೇಕವಾಗಿ ಚರ್ಚೆಯಾಗುವುದು ಒಳ್ಳೆಯದು.

ಶ್ರೀ ಎಸ್.ಸುರೇಶ್‌ಕುಮಾರ್: ಮಾನ್ಯ ಉಪಾಧ್ಯಕ್ಷರೆ, ಮೊದಲನೆ ಪ್ರಶ್ನೆಗೆ ಬೆಂಗಳೂರಿನಲ್ಲಿ ಕುಡಿಯುವ ನೀರಿಗೆ ಅಭಾವ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ ಎಂದು ಹೇಳಿದ್ದಾರೆ. ವಿಶೇಷವಾಗಿ ಈ ಕುಡಿಯುವ ನೀರಿನ ಅಭಾವ ಗಮನಕ್ಕೆ ಬಂದಮೇಲೆ ಅದರ ನಿವಾರಣೆಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ? ವಿಶೇಷವಾಗಿ ತಿಪ್ಪಗೊಂಡನಹಳ್ಳಿ ಜಲಾಶಯದಿಂದ ಬರುವಂಥ ನೀರಿಗೆ ಆಧಾರಿತವಾಗಿರುವ ವಿಜಯನಗರ, ಬಸವೇಶ್ವರನಗರ ಮತ್ತು ರಾಜಾಜಿನಗರದ 2ನೇ ಹಂತ ಈ ಕಡೆಗಳಿಗೆ ಇತ್ತೀಚಿನ ದಿನಗಳಲ್ಲಿ 2 ದಿವಸಕ್ಕೆ ಒಂದು ಸಲ ಕೂಡ ನೀರು ಕೊಡುವುದಕ್ಕೆ ಆಗುತ್ತಿಲ್ಲ. ನಾಲ್ಕೈದು ದಿವಸಕ್ಕೆ ಒಂದು ಸಲ ನೀರು ಬರುತ್ತದೆ, ಆ ನೀರು ಬಂದರೂ ಕೂಡ ಅದರಲ್ಲಿ ಯಾವುದೇ ರೀತಿಯ ಪ್ರೆಷರ್ ಇರುವುದಿಲ್ಲ. 'ಬೆಂಗಳೂರು ನಗರದಲ್ಲಿ ನೀರು ಸರಬರಾಜು ಮಂಡಳಿಯವರು ನಲ್ಲಿಯ ಮೂಲಕ ಮನೆಗಳಿಗೆ ನೀರು ಕೊಡುವುದಕ್ಕಿಂತ ಜಾಸ್ತಿ ನೀರು ಕೊಳವೆ ಒಡೆದು ಲೀಕ್ ಆಗಿ ರಸ್ತೆಯಲ್ಲಿ, ಚರಂಡಿಯಲ್ಲಿ ನೀರು ಹರಿಯುತ್ತದೆ' ಎಂದು ರಾಜ್ಯ ಉಚ್ಚ ನ್ಯಾಯಾಲಯ ಒಂದು ಆದೇಶ ಹೊರಡಿಸುವ ಸಂದರ್ಭದಲ್ಲಿ ಇದನ್ನು ಹೇಳಿದೆ. ಇದು ಸನ್ಮಾನ್ಯ ಸಚಿವರ ಗಮನಕ್ಕೂ ಸಹ ಬಂದಿರಬಹುದು. ಈ ಲೀಕೇಜನ್ನು ಬಹಳ ಸೀರಿಯಸ್ ಆಗಿ ಗಮನಿಸಿದಾಗ, ನನ್ನ ಪ್ರಕಾರ ಬೆಂಗಳೂರಿನಲ್ಲಿ ಶೇಕಡ 40ರಷ್ಟು ನೀರು ಲೀಕೇಜ್ ಆಗಿ ವೇಸ್ಟ್ ಆಗಿ ಹರಿದುಹೋಗುತ್ತಿದೆ. ಅದಕ್ಕೋಸ್ಕರ ಉಚ್ಚನ್ಯಾಯಾಲಯವು ಒಂದು ಲೀಕೇಜ್‌ಗೆ ಪರ್

ಡೇಗೆ 10 ಸಾವಿರ ರೂಪಾಯಿಗಳ ದಂಡವನ್ನು ವಿಧಿಸಿದ್ದಾರೆ. ನಿಮ್ಮ ಹತ್ತಿರ ಈ ಲೀಕೇಜ್‌ನ್ನು ಸರಿಪಡಿಸುವುದಕ್ಕೆ ಸಿಬ್ಬಂದಿ ಇಲ್ಲ ಇದನ್ನು ಸರಿಪಡಿಸುವುದಕ್ಕೆ ಕಂಟ್ರಾಕ್ಟ್ ಕೊಟ್ಟಿದ್ದಾರೆ. ಈ 40 ಪರ್ಸಂಟ್ ನೀರು ಲೀಕೇಜ್ ಆಗುವುದನ್ನು ನಿಲ್ಲಿಸಲು ವಿಶೇಷವಾಗಿ ತಿಪ್ಪಗೊಂಡನಹಳ್ಳಿ ಜಲಾಶಯದಿಂದ ಬರುವಂಥ ನೀರನ್ನು ಉಪಯೋಗಿಸುವಂಥ ಜನರಿಗೆ ನೀವು ಏನು ಪರಿಹಾರ ಕೊಡುತ್ತೀರಿ?

ಶ್ರೀ ಅನಂತನಾಗ್: ಮಾನ್ಯ ಉಪಾಧ್ಯಕ್ಷರೆ, ಈ ಪ್ರಶ್ನೆ ಕಳೆದ ಸಲದ ಅಧಿವೇಶನದಲ್ಲೂ ಸಹ ಕೇಳಲಾಗಿತ್ತು. ತಿಪ್ಪಗೊಂಡನಹಳ್ಳಿ ಜಲಾಶಯದಿಂದ ಮೊದಲು ಎಷ್ಟು ನೀರು ಸರಬರಾಜು ಆಗುತ್ತಿತ್ತು ಈಗ ಅದಕ್ಕಿಂತ ಕಡಿಮೆ ಸರಬರಾಜು ಆಗುತ್ತಿದೆ. ಅದಕ್ಕೋಸ್ಕರ ಕಾವೇರಿ 3ನೇ ಹಂತದಲ್ಲಿ ಹೆಚ್ಚುವರಿ ಪಂಪನ್ನು ಅಳವಡಿಸಿಕೊಂಡಿದ್ದೇವೆ. ಮತ್ತು ಎಲ್ಲಾ ಕಡೆ ನೀರು ಸರಬರಾಜು ಮಾಡುವಾಗ ಲೀಕೇಜಸ್ ತೊಂದರೆ ಇದೆ. ಇದಕ್ಕೆ ಸಂಬಂಧಪಟ್ಟವಂತೆ ಮಾನ್ಯ ಸದಸ್ಯರು ಪ್ರತ್ಯೇಕವಾಗಿ ಪ್ರಶ್ನೆ ಕಳುಹಿಸಿಕೊಟ್ಟರೆ ಅದಕ್ಕೆ ಉತ್ತರವನ್ನು ತಯಾರು ಮಾಡಿ ಸದನದಲ್ಲಿ ಕೊಡಲಾಗುವುದು.

ಉಪಾಧ್ಯಕ್ಷರು: ಶ್ರೀ ವಾಟಾಳ್ ನಾಗರಾಜ್ ರವರೇ, ತಮ್ಮ 1389ನೇ ಚುಕ್ಕೆ ಗುರುತಿನ ಪ್ರಶ್ನೆಗೆ ಉತ್ತರ ಕೊಡಲು ಬೆಂಗಳೂರು ನಗರಾಭಿವೃದ್ಧಿ ಸಚಿವರು ಕಾಲಾವಕಾಶನ್ನು ಕೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಉಪಾಧ್ಯಕ್ಷರೆ, ಸಂಬಂಧಪಟ್ಟ ಮಂತ್ರಿಗಳು ಸದನದಲ್ಲಿಯೇ ಇದ್ದಾರೆ. ಈ ಪ್ರಶ್ನೆಗೆ ಉತ್ತರ ಕೊಡಲು ಅವರಿಗೆ ಕಾಲಾವಕಾಶ ಏಕೆ ಬೇಕು? ಇವರು ನಗರಾಭಿವೃದ್ಧಿ ಸಚಿವರಾಗಿ ಒಂದೂವರೆ ವರ್ಷವಾಯಿತು. ಈ ಪ್ರಶ್ನೆಗೆ ಕಾಲಾವಕಾಶ ಕೇಳತಕ್ಕಂಥದ್ದು ಏನಿದೆ? ಮಾತೆತ್ತಿದರೆ ಮೇಲುಸೇತುವೆ ಮಾಡಿಸಿದ್ದೇವೆ, ವೃತ್ತ ರೈಲ್ವೆ ಮಾಡಿಸುತ್ತೇವೆ ಎಂದು ಹೇಳುತ್ತಾರೆ. ಈಗ ಕಾಲಾವಕಾಶ ಕೇಳುವುದಕ್ಕೆ ಕಾರಣವೇನು?

ಶ್ರೀ ಅನಂತನ್‌ನಾಗ್: ಮಾನ್ಯ ಉಪಾಧ್ಯಕ್ಷರೆ, ಶ್ರೀ ವಾಟಾಳ್ ನಾಗರಾಜ್ ರವರ ಪ್ರಶ್ನೆಗೆ ಅಷ್ಟು ಸಲೀಸಾಗಿ ಉತ್ತರ ಕೊಡುವುದಕ್ಕಾಗುವುದಿಲ್ಲ. ಬೆಂಗಳೂರಿನ ಸಮಗ್ರ ಅಭಿವೃದ್ಧಿಗೆ ಏನೇನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ ಎಂದು ಕೇಳಿದ್ದಾರೆ. ಸಮಗ್ರ ಅಭಿವೃದ್ಧಿ ಅಂದರೆ ಬಿ.ಎಂ.ಆರ್.ಡಿ.ಎ., ಕಾರ್ಪೋರೇಷನ್, ಬಿ.ಡಿ.ಎ., ವಾಟರ್ ಸಪ್ಲೈ ಹೀಗೆ ಈ ಎಲ್ಲಾ ಕಡೆಯಿಂದ ಉತ್ತರವನ್ನು ತರಿಸಿಕೊಡಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್: ಈಗ ಬೆಂಗಳೂರಿಗೆ ಸಂಬಂಧಪಟ್ಟಂತೆ ಸರಿಯಾದ ಅಭಿವೃದ್ಧಿ ಕಾರ್ಯಕ್ರಮಗಳು ಇಲ್ಲದೆ ಬೆಂಗಳೂರು ಸಂಪೂರ್ಣವಾಗಿ ನಾಶವಾಗಿ ಹೋಗುತ್ತಿದೆ. ಈಗ ಬೆಂಗಳೂರನ್ನು ಉಳಿಸಿ ಎಂದು ಪಕ್ಷಾತೀತವಾಗಿ ಎಲ್ಲಾ

ಪಕ್ಷದವರು ಹೋರಾಟ ಮಾಡತಕ್ಕಂಥ ಕಾಲ ಬಂದಿದೆ. ಈಗ ಇಲ್ಲಿ ಮಂತ್ರಿಮಂಡಲ ಇದೆ, ಮಂತ್ರಿಯವರು ಇದ್ದಾರೆ, ಶಾಸಕರುಗಳು ಇದ್ದಾರೆ, ಅಧಿಕಾರಿಗಳು ಇದ್ದಾರೆ, ಇವರೆಲ್ಲಾ ಇದ್ದರೂ ಸಹ ಸಂಪೂರ್ಣವಾಗಿ ಬೆಂಗಳೂರು ಪತನದ ಅಂಚಿಗೆ ಹೊರಟುಹೋಗಿದೆ. ಆದ್ದರಿಂದ ಈ ಪ್ರಶ್ನೆಯನ್ನು ಯಾವಾಗ ಚರ್ಚೆಗೆ ತೆಗೆದುಕೊಳ್ಳುತ್ತೀರಿ? ಇದಕ್ಕೆ ಉತ್ತರವನ್ನು ಯಾವಾಗ ಕೊಡುತ್ತಾರೆ? ಎಂಬುದನ್ನು ಹೇಳಬೇಕು.

ಉಪಾಧ್ಯಕ್ಷರು: ಈ ಪ್ರಶ್ನೆಗೆ ಉತ್ತರ ರೆಡಿಮಾಡಿ ಕೊಡಲು 2 ವಾರಗಳ ಕಾಲಾವಕಾಶವನ್ನು ಸಂಬಂಧಪಟ್ಟ ಮಂತ್ರಿಯವರು ಕೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್: 'ಊರು ಎಲ್ಲಾ ಕೊಳ್ಳೆ ಹೊಡೆದು ಬಾಗಿಲು ಮುಚ್ಚಿಹೋದ ಮೇಲೆ' ಇವರು ಉತ್ತರ ಕೊಟ್ಟರೆ ಏನು ಪ್ರಯೋಜನ ಸ್ವಾಮಿ? ಬೆಂಗಳೂರು ಕಥೆ ಮುಗಿದು ಹೋಗುತ್ತದೆ. ಬೆಂಗಳೂರಿನಲ್ಲಿ ಉಸಿರು ಕಟ್ಟುವ ವಾತಾವರಣವಾಗಿದೆ. ಈಗ ನಾನು ಏನು ಮಾಡಬೇಕೆಂಬುದನ್ನು ಮಾನ್ಯ ಉಪಾಧ್ಯಕ್ಷರು ನನಗೆ ಹೇಳಬೇಕು.

ಉಪಾಧ್ಯಕ್ಷರು: ಈಗ ಅವರು ಸಮಯ ಕೇಳಿದ್ದಾರೆ. ಆದ್ದರಿಂದ ಮುಂದಿನ ಸಲ ಇದನ್ನು ತೆಗೆದುಕೊಳ್ಳೋಣ.

ಶ್ರೀ ವಾಟಾಳ್ ನಾಗರಾಜ್: ಸಂಬಂಧಪಟ್ಟ ಮಂತ್ರಿಗಳು ಈ ತರಹ ಮಾಡಿದರೆ ಇದು ಸರಿಯಾದುದು ಅಲ್ಲ. ಮುಂದೆ ಹೀಗೆ ಮಾಡಿದರೆ ಸಂಬಂಧಪಟ್ಟ ಮಂತ್ರಿಗಳ ಮೇಲೆ ಫೆರಾವು ಮಾಡಬೇಕಾಗುತ್ತದೆ. ನಾನು ಈಗ ಇದನ್ನು ಪ್ರತಿಭಟಿಸಿ ಹೊರಗಡೆಗೆ ಹೋಗುತ್ತೇನೆ. ಬೆಂಗಳೂರು ನಗರ ಕುಲಗೆಟ್ಟು ಹೋಗಿದೆ. ಕುಡಿಯುವ ನೀರಿನ ವ್ಯವಸ್ಥೆ ಸರಿಯಾಗಿಲ್ಲ. ರಸ್ತೆ ಸರಿಯಿಲ್ಲ, ಸಂಚಾರ ವ್ಯವಸ್ಥೆ ಸರಿಯಾಗಿಲ್ಲ.

(ಈ ಹಂತದಲ್ಲಿ ಶ್ರೀ ವಾಟಾಳ್ ನಾಗರಾಜುರವರು ತಮ್ಮ ಆಸನ ಬಿಟ್ಟು ಉಪಾಧ್ಯಕ್ಷರ ಪೀಠದ ಬಳಿಗೆ ಬಂದರು)

ಉಪಾಧ್ಯಕ್ಷರು: ಶ್ರೀ ವಾಟಾಳ್ ನಾಗರಾಜು ರವರೇ, ನೀವು ತಮ್ಮ ಆಸನದ ಹತ್ತಿರ ನಿಂತು ಮಾತನಾಡಿ. ಇಲ್ಲಿ ಬಂದು ಮಾತನಾಡಬಾರದು.

ಶ್ರೀ ವಾಟಾಳ್ ನಾಗರಾಜ್: ನನಗೆ ಈಗ ಸಂಬಂಧಪಟ್ಟ ಮಂತ್ರಿಯವರಿಂದ ಉತ್ತರ ಕೊಡಿಸಿ.

ಉಪಾಧ್ಯಕ್ಷರು: ಅವರು 2 ವಾರಗಳ ಕಾಲಾವಕಾಶವನ್ನು ಕೇಳಿದ್ದಾರೆ. ಈಗ ಹೇಗೆ ಉತ್ತರ ಕೊಡಿಸುವುದಕ್ಕಾಗುತ್ತದೆ? 2 ವಾರಗಳ ನಂತರ ಖಂಡಿತವಾಗಿ ನಾನು ಅವರಿಂದ

ತಮಗೆ ಉತ್ತರವನ್ನು ಕೊಡಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ನಾನು ಇದನ್ನು ವಿರೋಧಿಸಿ ಸಭಾತ್ಯಾಗ ಮಾಡುತ್ತೇನೆ. ಮಾನ್ಯ ಮಂತ್ರಿಗಳು ಉತ್ತರ ಕೊಡದಿರುವುದು ಸರಿಯಲ್ಲ.

ಶ್ರೀ ಅನಂತನಾಗ್: ಮಾನ್ಯ ಉಪಾಧ್ಯಕ್ಷರೆ, ಮೇಲು ಸೇತುವೆ, ವರ್ತುಲ ರಸ್ತೆ, ಮುಂತಾದ ಬಹಳ ಸಮಗ್ರವಾದ ಪ್ರಶ್ನೆಯನ್ನು ಕೇಳಿದ್ದಾರೆ. ವರ್ತುಲ ರೈಲ್ವೆ ಇದು ಯಾವ ಕಾಲದಲ್ಲಿ ಇತ್ತು?

(ಈ ಹಂತದಲ್ಲಿ ಶ್ರೀ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ವಿಷಯ: ಶಿರಾ ತಾಲ್ಲೂಕು ಚಿಕ್ಕ ಅಗ್ರಹಾರ ಕೆರೆ ದುರಸ್ತಿ ಕಾಮಗಾರಿ.

213 (1258)

ಶ್ರೀ ಟಿ.ಬಿ.ಜಯಚಂದ್ರ (ಕಳ್ಳಂಬೆಳ್ಳ): ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿರಾ ತಾಲ್ಲೂಕು, ಚಿಕ್ಕ ಅಗ್ರಹಾರ ಕೆರೆಯ ದುರಸ್ತಿಯನ್ನು ಇದುವರೆಗೂ ಕೈಗೆತ್ತಿಕೊಳ್ಳದೇ ಇರಲು ಕಾರಣವೇನು, ಇದಕ್ಕೆ ಬೇಕಾದ ಹಣವೆಷ್ಟು?

ಆ) ಈ ಸಾಲಿನಲ್ಲಿ ಸದರಿ ಕಾಮಗಾರಿಯನ್ನು ಕೈಗೆತ್ತಿಕೊಂಡು ಕೆಲಸ ಪೂರ್ಣಗೊಳಿಸುವ ಬಗ್ಗೆ ಸಕ್ರಮ ಕೈಗೊಳ್ಳುವುದೇ?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು): [illegible]

ಅ) ಶಿರಾ ತಾಲ್ಲೂಕು, ಚಿಕ್ಕ ಅಗ್ರಹಾರ ಕೆರೆಯ ಕೋಡಿ ದಿನಾಂಕ: 20-9-95 ರಂದು ಬಿದ್ದ ಅನಿರೀಕ್ಷಿತ ಭಾರಿ ಮಳೆಯಿಂದಾಗಿ ಕೊಚ್ಚಿಕೊಂಡು ಹೋಗಿದೆ. ಸದರಿ ಕೆರೆ ಜಿಲ್ಲಾ ಪಂಚಾಯತ್‌ನ ವ್ಯಾಪ್ತಿಯಲ್ಲಿದ್ದು, ಅವಶ್ಯಕ ಅನುದಾನ ಒದಗಿಸದೇ ಇರುವುದರಿಂದ ದುರಸ್ತಿಯನ್ನು ಕೈಗೆತ್ತಿಕೊಳ್ಳಲಾಗಿಲ್ಲ. ಕೆರೆಯ ಕೋಡಿಯ ಪುನರ್ ನಿರ್ಮಾಣ ಹಾಗೂ ಕೆರೆಯ ಸಾಮರ್ಥ್ಯವನ್ನು ಹೆಚ್ಚಿಸಲು ಸುಮಾರು 20.00 ಲಕ್ಷ ರೂ.ಗಳು ಬೇಕಾಗುತ್ತದೆ.

ಆ) ಜಿಲ್ಲಾ ಪಂಚಾಯತ್‌ನಿಂದ ಅವಶ್ಯಕ ಅನುದಾನ ನೀಡಿದಲ್ಲಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಕ್ರಮ ಕೈಗೊಳ್ಳಲಾಗುವುದು.

ಶ್ರೀ ಟಿ.ಬಿ.ಜಯಚಂದ್ರ: ಮಾನ್ಯ ಉಪಾಧ್ಯಕ್ಷರೆ, ನನ್ನ ಪ್ರಶ್ನೆಗೆ ಉತ್ತರವನ್ನು ಕೊಡಿಸುವಂಥ ಸಂದರ್ಭದಲ್ಲಿ 20-9-1995ರಂದು ಬಿದ್ದ ಅನಿರೀಕ್ಷಿತ ಭಾರೀ